

ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು

# ಇಕ್ಕಟ್ಟಿಗೆ ಸಿಕ್ಕಿದ್ದ ಚಂದ್ರಮುಕುಟ

ವಿದ್ಯಾ ಮತ್ತು ರಾಜಾರಾಮ್ ಶರ್ಮ
ಅನುವಾದ: ಅಂಬಿಕ ಆರ್

ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು

# ಇಕ್ಕಟ್ಟಿಗೆ ಸಿಕ್ಕಿದ್ದ ಚಂದ್ರಮುಕುಟ

ವಿದ್ಯಾ ಮತ್ತು ರಾಜಾರಾಮ್ ಶರ್ಮ
ಅನುವಾದ: ಅಂಬಿಕ ಆರ್

Vidya Online
A PARTNERSHIP FOR TEACHERS, CHILDREN AND EDUCATION



ಈ ಕಥೆ ದಕ್ಷಿಣ ದೆಹಲಿಯ ರಿಡ್ಜ್ ಅರಣ್ಯ ಪ್ರದೇಶದಲ್ಲಿರುವ ಸಂಜಯ ವನದಲ್ಲಿ 2010 ರ ಮೇ ಯಿಂದ ಆಗಸ್ಟ್ ರವರೆಗೂ ಮಾಡಿದ ಅವಲೋಕನೆಗಳನ್ನು ಆಧರಿಸಿದೆ. ಗುಳುಮುಳುಕಗಳ ಹಾಗು ಸಿಂಪಿಗಗಳ ಸಂತಾನೋತ್ಪತ್ತಿಯ ಋತು ದೀರ್ಘವಾದದ್ದು.

ಈ ಪುಸ್ತಕದಲ್ಲಿ ಇರುವ ಚಿತ್ರಗಳು ಪಕ್ಷಿಯ ಅಥವ ಗೂಡುಗಳ ನಿಜವಾದ ಗಾತ್ರವನ್ನು ತೋರಿಸದೇ ಇರಬಹುದು.

IKKATTIGE SIKKIDA CHANDRAMUKUTA, the downloadable e-book available at https://www.vidyaonline.net and published by VIDYA ONLINE is licensed under a Creative Commons Attribution-NonCommercial-ShareAlike 4.0 Unported License (https://creativecommons.org/licenses/by-nc-sa/4.0/)

Permissions beyond the scope of this license may be available at admin@vidyaonline.org

ಎರಡು ನೀರು ಹಕ್ಕಿಗಳು ಅರ್ಧ ಗಂಟೆಗಿಂತ ಹೆಚ್ಚು ಸಮಯದಿಂದ ಕೆಲಸ ಮಾಡುತ್ತಿದ್ದುವು. ಅವು ಕೊಳೆತ ಕಳೆಗಳ ಒಂದು ರಾಶಿಯನ್ನು ಮಡುತ್ತಿದ್ದವು.

ಈ ಸಣ್ಣ ಹಕ್ಕಿಗಳು ವೇಗವಾಗಿ ಈಜುತ್ತಾ ಆಗಾಗ್ಗೆ ಮುಳುಗು ಹಾಕುತ್ತಿದ್ದವು. ಅವು ನೀರಿನಲ್ಲಿ ಮುಳುಗಿದಾಗ ಎಲ್ಲಿ ಮೇಲೆ ಬರಬಹುದೆಂದು ಅಂದಾಜುಮಾಡಲು ನನಗೆ ಕಷ್ಟವಾಗುತ್ತಿತ್ತು.





ಪ್ರತಿ ಸಲ ಈ ಹಕ್ಕಿಗಳು ನೀರಿಗೆ ಧುಮುಕಿದಾಗ ಆಶ್ಚರ್ಯಕರವಾಗಿ ಒಂದು ಕೊಳೆತ ಎಲೆ ಅಥವಾ ಕಳೆಯನ್ನು ಹುಡುಕಿ ತರುತ್ತಿದ್ದವು. ಕೊಳೆತ ರಾಶಿಯ ಕಡೆಗೆ ವೇಗವಾಗಿ ಈಜಿಕೊಂಡು ಹೋಗಿ ತಂದದ್ದನ್ನು ಅದಕ್ಕೆ ಸೇರಿಸುತ್ತಿದ್ದವು. ಆಗಾಗ್ಗೆ ಎರಡು ಹಕ್ಕಿಗಳಲ್ಲಿ ಒಂದು ಆ ರಾಶಿಯ ಮೇಲೆ ಹತ್ತುತ್ತಿತ್ತು. ಆಗ ಆ ರಾಶಿ ಸ್ವಲ್ಪ ಅಲ್ಲಾಡುತ್ತಿತ್ತು. ರಾಶಿಯ ಕೆಳಗೆ ಆಧಾರಕ್ಕೆ ಏನಾದರೂ ಇದೆಯೇ? ಅಥವಾ ನೀರಿನ ಮೇಲೆ ತೇಲುತ್ತಿದೆಯೇ ತಿಳಿಯಲಿಲ್ಲ.

“ನೀವು ಏನು ಮಾಡುತ್ತಿದ್ದೀರಿ? ಸುಧಾರಿಸಿಕೊಳ್ಳಲು ಒಂದು ದ್ವೀಪ ಮಾಡುತ್ತಿದ್ದೀರಾ?” ನಾನು ಕುತೂಹಲವನ್ನು ತಡೆಯಲಾರದೆ ಆ ನೀರು ಹಕ್ಕಿಗಳನ್ನು ಕೇಳಿದೆ.

“ಅದಿರಲೀ... ನೀನು ಏನು ಮಾಡುತ್ತಿರುವೆ ಇಲ್ಲಿ?” ಅಧಿಕಾರದ ಧ್ವನಿಯಲ್ಲಿ ಕಂದು ಬಿಳಿ ಹಾಗೂ ಕಪ್ಪು ಬಣ್ಣ ಇದ್ದ ಇನ್ನೊಂದು ಹಕ್ಕಿ ಕೇಳಿತು.

“ನೀನು ಯಾರು?” ನಾನು ಆಶ್ಚರ್ಯದಿಂದ ಕೇಳಿದೆ.

“ನಾನು ಚಂದ್ರಮುಕುಟ. ಈ ಜಾಗದಲ್ಲೇ ಇರುವವಳು. ನಾವುಗಳು ಬೇರೆಯವರ ವ್ಯವಹಾರದಲ್ಲಿ ತಲೆಹಾಕುವುದಿಲ್ಲ. ಹಾಗೆಯೇ ನೀನೂ ನಿನ್ನ ಕೆಲಸ ನೋಡಿಕೋ,” ಎಂದಿತು.

ಈ ನೀರು ಹಕ್ಕಿಗಳು ಏನು ಮಾಡುತ್ತಿವೆ ಎಂದು ತಿಳಿಯಲೇಬೇಕಾಗಿತ್ತು. ಈಗ ಇದೆ ನನ್ನ ಕೆಲಸವಾಗಿತ್ತು. ಕೊಳದ ಏರಿಯ ಮೇಲೆ ಇದ್ದ ಕಕ್ಕೆ





ಮರಕ್ಕೆ ಒರಗಿ ಕಾಯುತ್ತಾ ನಿಂತುಬಿಟ್ಟೆ.

ನಾನು ಒರಗಿದ ಮರ ಹೂವು ಬಿಟ್ಟಿತ್ತು. ಸುಂದರವಾಗಿ ಗೊಂಚಲು ಗೊಂಚಲಾಗಿ ತುಗಾಡುತ್ತಿದ್ದ ಹೂವುಗಳು, ಮೊಗ್ಗುಗಳನ್ನು ತಲೆಯೆತ್ತಿ ನೋಡುತ್ತಿರುವಾಗ, “ಹೇ ಏನು ಮಾಡುತ್ತಿರುವೆ?” ಚಂದ್ರಮುಕುಟ ಹಕ್ಕಿಯ ಜೋರಾದ ಕೂಗಿಗೆ ಎಚ್ಚೆತ್ತೆ!

“ಏನು ಮಾಡುತ್ತಿದ್ದೇನೆ?” ಈ ಹಕ್ಕಿ ನನಗೆ ಏಕೆ ಗದರುತ್ತಿದೆ ಎಂದು ತಿಳಿಯದೆ ಕೇಳಿದೆ.

“ಆ ಎಲೆಯನ್ನು ಬಿಡು,” ಹಕ್ಕಿ ತಾಕೀತು ಮಾಡಿತು.

ನನಗೆ ಅರಿವೇ ಇಲ್ಲದೆ ಪಕ್ಕದ ಮರದ ಎಲೆಯನ್ನು ಎಳೆಯುತ್ತಿದ್ದೇ. ನನ್ನ ಕೈಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಂಡು ಎಲೆ ಕಿತ್ತಿದ್ದಕ್ಕೆ ಕ್ಷಮೆ ಕೇಳಿದೆ. ಅದು ಒಂದು ತೇಗದ ಮರ ಎಂದು ಗಮನಿಸಿದೆ.

"ಗೂಡು...ಸಿಂಪಿಗ ಹಕ್ಕಿಯ ಗೂಡು" ಮಡಚಿಕೊಂಡಿದ್ದ ಆ ಮರದಒಂದು ಎಲೆ ನೋಡಿ ನಾನು ಉತ್ಸಾಹದಿಂದ ಕೂಗಿದೆ. "ಆ ಹಕ್ಕಿ ಮಾತ್ರ ಎಲೆಗಳನ್ನು ಹೊಲಿದು ಗೂಡು ಮಾಡುತ್ತದೆ."

"ನೀನು ಹೇಳಿದ್ದು ಅರ್ಧ ಸತ್ಯ! ಸುವ್ವಿಗಳೂ ಎಲೆಗಳನ್ನು ಹೊಲಿಯುತ್ತವೆ. ಇನ್ನು ಎಂದೆಂದಿಗೂ ಎಲೆಗಳನ್ನು ಕೀಳಬೇಡ ಅಥವಾ ಕಾರಣ ಇಲ್ಲದೆ ಮರಗಳಿಗೆ ತೊಂದರೆ ಮಾಡಬೇಡ," ಎಂದು ಕಟ್ಟುನಿಟ್ಟಾಗಿ ಎಚ್ಚರಿಸಿತು.





ನಾನು ಆ ಗೂಡನ್ನು ನೋಡುತ್ತಾ ಮೈಮರೆತೆ.

ಪುಸ್ತಕಗಳಲ್ಲಿ ನೋಡಿದ್ದ ಗೂಡಿನ ಚಿತ್ರಗಳಂತೆ ಇದು ಇರಲಿಲ್ಲ. ಪುಸ್ತಕದಲ್ಲಿ ತೋರಿಸಿದ್ದ ಗೂಡು ಮೂರು ಅಥವಾ ನಾಲ್ಕು ಎಲೆಗಳನ್ನು ಹೊಲೆದು ಮಾಡಿದ ಒಂದು ತಲೆ ಕೆಳಗಾದ ಶಂಕುವಿನ ರೀತಿ ಇತ್ತು.

ಆದರೆ ಈ ಗೂಡು ತೇಗದ ಮರದ ಒಂದೇ ಒಂದು ಎಲೆಯಿಂದ ಮಾಡಲಾಗಿತ್ತು. ಎಲೆಯ ಅಂಚು ಮತ್ತು ಕೆಳಭಾಗದಲ್ಲಿ ಮಾಡಿದ್ದ ಸಣ್ಣ ತೂತುಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಹತ್ತಿ ಅಥವಾ ಜೇಡದ ಬಲೆಯ ಎಳೆಗಳನ್ನು ತೂರಿಸಿ ಎಲೆಯ ಅಂಚನ್ನು ಹತ್ತಿರಕ್ಕೆ ತಂದು ದಿಂಡಿನ ಆಕಾರ ಮಾಡಲಾಗಿತ್ತು.

ಆ ದಿಂಡಿನ ಒಂದು ತುದಿಯಲ್ಲಿ ಮೆತ್ತಗಿನ ಹುಲ್ಲು ಮತ್ತು ನಾರನ್ನು ಒತ್ತರಿಸಿ ಗೂಡನ್ನು ಮಾಡಲಾಗಿತ್ತು. ಈ ಅದ್ಭುತವಾದ ಗೂಡಿನಲ್ಲಿ ಒಂದು ಚಿಕ್ಕ ಸುಂದರವಾದ ಮೊಟ್ಟೆ ಇತ್ತು.

ನಾನು ತಿರುಗಿ ನೋಡಿದಾಗ ಚಂದ್ರಮುಕುಟ ಹಕ್ಕಿ ಮುಗುಳ್ನಗುತ್ತ, “ಚಿಕ್ಕ ಹಕ್ಕಿಗಾಗಿ ಚಿಕ್ಕ ಗೂಡು. ಈಗ ಒಳ್ಳೆಯವಳಂತೆ ಹಿಂದಕ್ಕೆ ಬಾ. ಗೂಡು ಕಟ್ಟಿದ ಸಿಂಪಿಗ ಹಕ್ಕಿಗಳು ಯಾವ ಕ್ಷಣದಲ್ಲಾದರೂ ಹಿಂದಿರುಗಿ ಬರಬಹುದು. ಅವರಿಗೆ ತಮ್ಮ ಗೂಡಿನ ಗುಟ್ಟು ರಟ್ಟಾಗಿದ್ದು ತಿಳಿದರೆ ಇಷ್ಟ ಆಗುವುದಿಲ್ಲ,” ಎಂದಿತು.

ನಾನು ಅದರ ಮಾತನ್ನು ಕಡೆಗಣಿಸಿದೆ. ಇದಕ್ಕೆ ಮುಂಚೆ ಸಿಂಪಿಗ ಹಕ್ಕಿಯ





ಗೂಡನ್ನು ನಾನು ನೋಡೇ ಇರಲಿಲ್ಲ. ಅದನ್ನು ನೋಡುತ್ತಾ ಅಲ್ಲೇ ನಿಂತುಬಿಟ್ಟೆ.

“ಅಲ್ಲಿ ನೋಡು” ಚಂದ್ರಮುಕುಟ ಹಕ್ಕಿ ಹೇಳಿತು “ಅಲ್ಲಿ ಒಂದು ಸುಂದರವಾದ ಹಸಿರು ಹಕ್ಕಿ ಕಾಣುತ್ತಿದೆಯಲ್ಲ, ಅದರ ಹೆಸರು ಕಳ್ಳಿ ಪೀರ.” ಕಂಬಿಯ ಮೇಲೆ ಚಂದದ ಹಸಿರು ಬಣ್ಣದ ಹಕ್ಕಿ ಕುಳಿತಿತ್ತು. ಅದರ ಉದ್ದದ ಕೊಕ್ಕಿನ ಮಧ್ಯೆ ದುಂಬಿ ಒಂದು ಸಿಕ್ಕಿಕೊಂಡಿತ್ತು.

“ಓ, ಕಳ್ಳಿ ಪೀರಾ!” ನನಗೆ ಆ ಹೆಸರು ತಮಾಷೆಯಾಗಿದೆ ಎನಿಸಿತು.

“ನಮ್ಮಂತೆಯೇ ಕಳ್ಳಿ ಪೀರಗಳಲ್ಲಿ ಗಂಡು–ಹೆಣ್ಣು ಒಂದೇ ರೀತಿ ಕಾಣುತ್ತವೆ.

ಆದರೆ ಸೂರಕ್ಕಿ ಮತ್ತು ಗುಬ್ಬಿಗಳಲ್ಲಿ ಗಂಡು ಹೆಣ್ಣು ಬೇರೆ ಬೇರೆ ರೀತಿ ಇರುತ್ತವೆ. ಇನ್ನೂ ಕೆಲವು ಹಕ್ಕಿಗಳು…"

ಚಂದ್ರಮುಕುಟ ಹಕ್ಕಿಯ ಮಾತಿಗೆ ನಾನೇನು ಗಮನ ಕೊಡಲಿಲ್ಲ. ನನಗೆ ಕೆಲವು ಹಕ್ಕಿಗಳಲ್ಲಿ ಗಂಡು–ಹೆಣ್ಣು ಬೇರೆ ಬೇರೆ ಬಣ್ಣಗಳಲ್ಲಿರುವ ವಿಷಯ ಎಲ್ಲಾ ತಿಳಿದಿತ್ತು.

ಆಗ, "ನನ್ನ ಜೊತೆಗೆ ಬಾ," ಎಂದು ಒತ್ತಾಯಿಸಿ ಚಂದ್ರಮುಕುಟ.

ಕೊಳದ ದಕ್ಷಿಣದ ಭಾಗದ ಕಡೆಗೆ ಹೊರಟಿತು ಆ ಹಕ್ಕಿಯ ಅವಸರ ನೋಡಿ ಏನೋ ವಿಶೇಷ ತೋರಿಸಬಹುದೆಂದು, ನಾನೂ ಹೊರಟೆ.





ಸ್ವಲ್ಪ ದೂರ ಹೋದಾಗ, ಹಲವು ವರ್ಷಗಳ ಹಿಂದೆ ಅಗೆದಿದ್ದ ಕೆಲವು ಗುಂಡಿಗಳು ಕಂಡವು. ಒಂದು ಗುಂಡಿಯನ್ನು ತೋರಿಸಿ ಚಂದ್ರಮುಕುಟ ಹಕ್ಕಿ, “ಅಲ್ಲಿ ಏನು ಕಾಣುತ್ತಿದೆ?” ಎಂದು ಕೇಳಿತು.

“ಏನಿಲ್ಲ... ಒಂದು ಹಳ್ಳ... ಸಸಿ ನೆಡಲು ತೋಡಿದ್ದಿರಬಹುದು.”

"ಸಸಿ ನೆಡುವ ಯೋಜನೆಯನ್ನು ಯಾರೂ ಮುಂದುವರಿಸಲಿಲ್ಲಾ, ಅಲ್ಲಿ ಇನ್ನೇನು ಕಾಣುತ್ತದೆ?" ಮತ್ತೆ ಪ್ರಶ್ನಿಸಿತು.

“ಮತ್ತೇನು? ಅದರ ಗೋಡೆ ಭಾಗದಲ್ಲಿ ಒಂದು ರಂಧ್ರ ಇದೆ, ಅಷ್ಟೇ,” ಎಂದು ಹೇಳಿದೆ ಅನುಮಾನಿಸಿ.

“ಅದು ಒಂದು ಸುರಂಗ. ಕಳ್ಳಿ ಪೀರ ಅದನ್ನು ಎರಡು ತಿಂಗಳ ಹಿಂದೆಯೇ ಮಾಡ್ಡಿತ್ತು,” ಎಂದಿತು ಹಕ್ಕಿ.

“ಯಾತಕ್ಕಾಗಿ?” ನಾನು ನಂಬಲಾರದೆ ಕೇಳಿದೆ.

“ಗೂಡು ಮಾಡಲು!”

ಕಳ್ಳಿ ಪೀರ ಹಕ್ಕಿ ಹೇಗೆ ಮೂರು ಅಡಿಗೂ ಹೆಚ್ಚು ಉದ್ದದ ಸುರಂಗವನ್ನು ಮಾಡಿ, ಅದರ ಕೊನೆಯಲ್ಲಿ ಮೊಟ್ಟೆಗಳನ್ನು ಇಡುತ್ತದೆ ಎಂದು ಚಂದ್ರಮುಕುಟ ಹಕ್ಕಿ ನನಗೆ ವಿವರಿಸಿತು. “ಅಷ್ಟು ಸಣ್ಣ ಹಕ್ಕಿ ಇಷ್ಟು ಉದ್ದದ ಸುರಂಗ ತೋಡಲು ಸಾಧ್ಯ ಎಂದು ನೀನು ಊಹಿಸಲು ಸಾಧ್ಯವೇ?





ಮಿಂಚುಳ್ಳಿ ಹಕ್ಕಿ ಸಹ ಇದೇ ರೀತಿ ಸುರಂಗದಲ್ಲಿ ಗೂಡು ಮಾಡುತ್ತದೆ. ಆದರೆ ಈ ಎರಡು ಹಕ್ಕಿಗಳ ಗೂಡು ಕಟ್ಟುವ ಕಾಲ ಈಗ ಮುಗಿದಿದೆ," ಎಂದಿತು ಚಂದ್ರಮುಕುಟ.

"ಓ! ನೀನು ನನ್ನ ಮೇಲೆ ಕಣ್ಣು ಇಟ್ಟಿದ್ದೀಯಾ?" ಮೋಸ ಹೋಗಿದ್ದು ಅರಿತು ಕೇಳಿದೆ. ಚಂದ್ರಮುಕುಟ ಬೇಕೆಂದೇ ಸಿಂಪಿಗ ಹಕ್ಕಿಯ ಗೂಡಿನಿಂದ ದೂರ ಕರೆದುಕೊಂಡು ಬಂದಿತ್ತು ನನ್ನನ್ನು.

"ಖಂಡಿತವಾಗಿ," ಚಂದ್ರಮುಕುಟ ಹಕ್ಕಿ ಹೇಳಿತು, "ನೀವುಗಳು ನಮ್ಮನ್ನು, ನಮ್ಮ ಗೂಡುಗಳನ್ನು ಗಮನಿಸುವುದು ನಮಗೆ ಇಷ್ಟ ಆಗುವುದಿಲ್ಲ ಎಂದು ನಾನು ಹೇಳಿದೆ ನೆನಪಿದೆಯೇ?"

ನಾನು ಯೋಚಿಸಿದೆ. ಚಂದ್ರಮುಕುಟ ಹಕ್ಕಿ ಏಕೆ ನನ್ನನ್ನು ದೂರ ಕಳುಹಿಸುತ್ತಿದೆ ಎಂದು ಅರ್ಥವಾಯಿತು. ಗೂಡುಗಳು ಯಾರಿಗೂ ಕಾಣಬಾರದು ಎನ್ನುವುದೇ ಹಕ್ಕಿಗಳ ಉದ್ದೇಶ.

ಅಲ್ಲಿ ಬೇರೇನೂ ಮಾಡಲು ತೋರದೆ, ನಾನು ಕೊಳದ ಕಡೆಗೆ ತಿರುಗಿದೆ.

ಪರಿಣತರಂತೆ ಈಜುತ್ತಿದ್ದ ಸಣ್ಣ ನೀರು ಹಕ್ಕಿಗಳನ್ನು ಎಣಿಸತೊಡಗಿದೆ. ಆ ಕೊಳವನ್ನು ಒಂದು ತುದಿಯಿಂದ ಇನ್ನೊಂದರ ಕಡೆಗೆ ನೋಡುತ್ತಿದ್ದಾಗ ಹಿಂದೆ ನೋಡಿದ್ದ ರಾಶಿಗಳಂತಿರುವ ಹಲವಾರು ರಾಶಿಗಳು ಇರುವುದನ್ನು ನೋಡಿದೆ. ಅವು ಏನು ಎಂದು ಕೇಳಿ ತಿಳಿಯಲು ಚಂದ್ರಮುಕುಟ ಹಕ್ಕಿಯ ಕಡೆಗೆ ತಿರುಗಿದೆ, ಆದರೆ ಅದು ಮಾಯವಾಗಿತ್ತು.





ಚಂದ್ರಮುಕುಟ ಹಕ್ಕಿಯನ್ನು ಹುಡುಕುತ್ತಾ ತೋಟಕ್ಕೆ ಹಿಂತಿರುಗಿ ಬಂದೆ. ಅದರ ಬದಲಿಗೆ ಒಂದು ಸಣ್ಣ ಕರಿ ಬಿಳಿ ಬಣ್ಣದ ಹಕ್ಕಿ ಮುಚ್ಚಿದ ಕಸದ ಡಬ್ಬಿಯೊಳಗೆ ಹೋಗುವುದನ್ನು ನೋಡಿದೆ. ಈ ಹಕ್ಕಿ ಏನು ಮಾಡುತ್ತಿದೆ? ಇಣುಕಿ ನೋಡಿದೆ.

"ಮೊಟ್ಟೆಗಳು! ಗೂಡು!" ಜೋರಾಗಿ ಕೂಗಿದೆ.

"ಕೂಗಬೇಡ," ಚಂದ್ರಮುಕುಟ ಹಕ್ಕಿ ನನ್ನ ತಲೆಯ ಮೇಲೆ ಹಾರುತ್ತಾ ಗದರಿತು. "ಅದು ಮಡಿವಾಳ ಹಕ್ಕಿಯ ಗೂಡು. ಹಿಂದೆ ಸರಿ ಬೇರೆಯವರ ಗಮನ ಇತ್ತ ಸೆಳೆಯಬೇಡ. ಈ ಹಕ್ಕಿಗಳು ಸಾಮಾನ್ಯವಾಗಿ ಮರದಲ್ಲಿರುವ ಪೊಟರೆಗಳಲ್ಲಿ ಗೂಡು ಕಟ್ಟುತ್ತವೆ. ಆದರೆ..."

ಮಡಿವಾಳ ಹಕ್ಕಿಯು ಈ ರೀತಿಯ ಜಾಗದಲ್ಲಿ ಗೂಡು ಮಾಡಲು ಹೇಗೆ ಯೋಚಿಸಿತು? ಎಲ್ಲಾ ಬಿಟ್ಟು ಕಸದ ಡಬ್ಬಿಯೊಳಗೆ! ನಾನು ಕುತೂಹಲದಿಂದ ಬಗ್ಗಿ ನೋಡಿದೆ. ಅಬ್ಬಾ ಕಡ್ಡಿಗಳ ಎಷ್ಟು ದೊಡ್ಡ ರಾಶಿಯನ್ನು ಆ ಹಕ್ಕಿ ಸೇರಿಸಿ ಗೂಡು ಮಾಡ್ದಿತ್ತು. ಎಂಥ ಅದ್ಭುತವಾದ ಗೂಡು ಕಟ್ಟಿತ್ತು!

"ತಡಿ... ರಾಶಿ! ದೊಡ್ಡ ರಾಶಿ... ಆ ನೀರಕ್ಕಿಗಳೂ ಕೊಳೆತ ಕಳೆಗಳನ್ನು ಸೇರಿಸಿ ದೊಡ್ಡ ರಾಶಿ ಮಾಡುತ್ತಿದ್ದವು. ಅವು ಸಹ ಗೂಡನ್ನು ಕಟ್ಟುತ್ತಿದ್ದವೆ?"

ಚಂದ್ರಮುಕುಟ ಹಕ್ಕಿ ಉತ್ತರಿಸಲು ಬಹಳ ಸಮಯ ತೆಗೆದುಕೊಂಡಿತು. "ಆ.... ಹೌದು," ಅದು ತಡವರಿಸುತ್ತಾ ಹೇಳಿತು, "ಆ ಹಕ್ಕಿಯನ್ನು ಗುಳಮುಳಕ ಎನ್ನುತ್ತಾರೆ. ಈಗ ಅವುಗಳ ಗೂಡುಕಟ್ಟುವ ಕಾಲ."





“ಓ... ಆ ಗೂಡು ತೇಲುತ್ತಿದೆಯಾ? ಅದರಲ್ಲಿ ಮೊಟ್ಟೆಗಳು ಕಾಣುತ್ತಿಲ್ಲವಲ್ಲಾ. ನೀರಿನಲ್ಲೇ ಇದ್ದರೆ ಅವು ಕೊಳೆತು ಹೋಗುವುದಿಲ್ಲವೇ? ಓ ದಯವಿಟ್ಟು.... ದಯವಿಟ್ಟು ಹೇಳು,” ನಾನು ಕೋರಿಕೊಂಡೆ.

ಚಂದ್ರಮುಕುಟ ಹಕ್ಕಿಗೆ ತೊಳಲಾಟ. ಅದು ನನಗೆ ಈ ವಿಷಯ ಹೇಳಲೇ ಬೇಡವೆ ಎಂದು ಯೋಚಿಸುತ್ತಿತ್ತು.

ಸ್ವಲ್ಪ ಸಮಯದ ನಂತರ ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಾ, “ಗೂಡು ಕಟ್ಟುವುದು ಮತ್ತು ಮರಿಗಳನ್ನು ಬೆಳೆಸುವುದು ಹಕ್ಕಿಗಳಿಗೆ ಬಹಳ ಮುಖ್ಯವಾದ ಕೆಲಸ. ನಾವು ಅದಕ್ಕಾಗಿ ತುಂಬಾ ಕಷ್ಟ ಪಡುತ್ತೇವೆ. ಗೂಡುಗಳು ಪತ್ತೆಯಾದರೆ... ಮೊಟ್ಟೆಗಳಿಗೆ, ಮರಿಗಳಿಗೆ ಅಪಾಯ. ಹಾಗಾಗಿ

ನಾವು ನಮ್ಮ ಗೂಡನ್ನು ಎಷ್ಟು ಸಾಧ್ಯವೋ ಅಷ್ಟು ಗುಟ್ಟಾಗಿ ಇಟ್ಟಿರುತ್ತೇವೆ. ಆದರೆ ನೀನು... ಈಗ ನಾನು ಏನು ಮಾಡಲು ಸಾಧ್ಯ?"

ನಾನು ಈ ಗೂಡುಗಳ ಬಗ್ಗೆ ಬೇರೆಯವರ ಗಮನ ಸೆಳೆಯುವುದಿಲ್ಲ. ಗೂಡಿಗೆ ಅಥವಾ ಅದರಲ್ಲಿ ಇರುವ ಮರಿಗಳಿಗೆ ತೊಂದರೆ ಮಾಡುವುದಿಲ್ಲ ಎಂದು ಭಾಷೆ ಕೊಟ್ಟೆ. ಮತ್ತೆ ಪರಿ ಪರಿಯಾಗಿ ಬೇಡಿಕೊಂಡ ಮೇಲೆ ಚಂದ್ರಮುಕುಟ ಹಕ್ಕಿ ಗುಳಮುಳುಕ ಹಕ್ಕಿಯ ಗೂಡಿನ ಗುಟ್ಟನ್ನು ಹೇಳಿತು.

ಗುಳುಮುಳುಕದ ಗೂಡುಗಳಿಗೆ ನೀರಿನ ಕೆಳಗೆ ಇರುವ ಕತ್ತರಿಸಿದ ಮರದ ಭಾಗ ಅಥವಾ ಮುಳುಗಿದ ಗಿಡಗಳ ಆಧಾರ ಇರುವುದರಿಂದ ಅವು ಮುಳುಗುವುದಿಲ್ಲ ಎಂದು ಹಕ್ಕಿ ಹೇಳಿತು.





ಗೂಡನ್ನು ಕಟ್ಟಿದ ಮೇಲೆ ಅದರಲ್ಲಿ 3–5 ಮೊಟ್ಟೆಗಳನ್ನು ಇಟ್ಟು ಇನ್ನು ಸ್ವಲ್ಪ ಕೊಳೆತ ಎಲೆಗಳಿಂದ ಮುಚ್ಚುತ್ತವೆ. ಹಾಗಾಗಿ ಆ ಮೊಟ್ಟೆಗಳು ಯಾರಿಗೂ ಕಾಣುವುದಿಲ್ಲ. ಆಗತಾನೇ ಇಟ್ಟ ಮೊಟ್ಟೆ ಅಥವಾ ಹಕ್ಕಿ ಮೊಟ್ಟೆಯ ಮೇಲೆ ಕುಳಿತುಕೊಳ್ಳಲು ಎಲೆಗಳನ್ನು ಸರಿಸಿದಾಗ ಮಾತ್ರ ಅವು ಕಾಣಿಸಿಕೊಳ್ಳುತ್ತವೆ. ಗುಳಮುಳುಕಗಳು ಗೂಡನ್ನು ಬಿಡುವಾಗ ಮರೆಯದೆ ಮೊಟ್ಟೆಗಳನ್ನು ಎಲೆಗಳಿಂದ ಮುಚ್ಚುತ್ತವೆ.

ನಾನು ಗುಳಮುಳುಕ ಹಕ್ಕಿಗಳನ್ನು ಗಮನಿಸುತ್ತಾ, ಚಂದ್ರಮುಕುಟ ಹಕ್ಕಿ ಹೇಳುತ್ತಿದ್ದುದನ್ನು ಎಚ್ಚರಿಕೆಯಿಂದ ಕೇಳುತ್ತಿದ್ದೆ.

ಎಂಥ ಅದ್ಭುತ! ನಾನು ಎಷ್ಟೊಂದು ಹಕ್ಕಿಗಳನ್ನು ನೋಡಿದ್ದರೂ ಅವು ಎಲ್ಲಿ, ಯಾವರೀತಿಯ ಗೂಡು ಮಾಡುತ್ತವೆ ಎಂದು ತಿಳಿದಿರಲಿಲ್ಲ.

ತುಂಟ ತನದಿಂದ ನಾನು, “ನಿನ್ನ ಗೂಡಿನ ಬಗ್ಗೆ ಹೇಳು. ಯಾವಾಗ ಮತ್ತು ಎಲ್ಲಿ ಮಾಡುತ್ತಿ?” ಎಂದು ಚಂದ್ರಮುಕುಟ ಹಕ್ಕಿಯನ್ನು ಕೇಳಿದೆ.

ಏನೂ ಹೇಳದೆ ಹಕ್ಕಿ ನನ್ನನ್ನೇ ದುರುಗುಟ್ಟಿಕೊಂಡು ನೋಡಿತು. ನಾನು ಅದರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಿರಲಿಲ್ಲ.

***





ಭೇಟಿ ಮಾಡಿ...



ಚಂದ್ರಮುಕುಟ Eurasian Hoopoe



ಗುಳುಮುಳುಕ  Dabchick or Little Grebe



ಕಳ್ಳಿ ಪೀರ Small Green Bee-eater



ತಂದೆ ಸಿಂಪಿಗ Father Tailorbird



ತಾಯಿ ಸಿಂಪಿಗ Mother Tailorbird



ತಾಯಿ ಮಡಿವಾಳ Mother Magpie Robin



ತಂದೆ ಮಡಿವಾಳ Father Magpie Robin



## ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು

ಅನುಕೂಲದ ಆಶ್ರಯ
ಆ ನಿಗೂಢ ಮೊಟ್ಟೆಗಳು
ಯಾರು ಹೆಚ್ಚು ಅದೃಷ್ಟವಂತರು
ಮಾಲಿಕರು ಹಾಗು ಆಕ್ರಮಣಕಾರಿಗಳು
ಇಕ್ಕಟ್ಟಿಗೆ ಸಿಕ್ಕಿದ್ದ ಚಂದ್ರಮುಕುಟ
ಎಲ್ಲಿದ್ದೀಯಪ್ಪಾ ಕಾಪರ್‌ಸ್ಮಿತ್!
ಒಳ್ಳೆಯ ಕೆಲಸ
ತೋರಿಸಿದ ದಾರಿ
ಮಣ್ಣಿನ ಅನುಬಂಧ
ವಿಚಿತ್ರ ಬೇಡಿಕೆ

Vidya Online

A PARTNERSHIP FOR TEACHERS, CHILDREN AND EDUCATION

Visit http://vidyaonline.net for more titles